ಸಾಂಗತ್ಯ ಬೇಸರಿಸತೊಡಗಿತು. ಅವನ ಆಳವಾದ ಪ್ರೀತಿಯೂ ಅವಳನ್ನು ಪುನಃ ಮೊದಲಿನಂತೆ ಬದಲಾಯಿಸಲಿಲ್ಲ. ಒಂದಿನ ಗೌರಿ ಮನೆಬಿಟ್ಟು ಹೊರಟೇಹೋದಳು ಹೇಳದೇ..! ಅವಳು ವಾಪಸ್ಸು ತನ್ನಲ್ಲಿಗೆ ಬರುತ್ತಾಳೆಂದು ಕೊನೇರಿ ಕಾದದ್ದೇ ಆಯ್ತು, ಅವಳು ಇವನೆಡೆಗೆ ಪುನಃ ಮುಖಮಾಡಲಿಲ್ಲ.

ಅವಳನ್ನು ಅಷ್ಟೊಂದು ಕಾಳಜಿಯಿಂದ ನೋಡಿಕೊಂಡರೂ, ನನ್ನ ಕುಡಿತದಿಂದ ಬೇಸತ್ತಳೇನೋ, ತನ್ನಿಂದ ಪಡೆಯಲಾಗದ ಫಲವನ್ನು ಬೇರೆಯವರಿಂದ ನಿರೀಕ್ಷಿಸಿದಳೇನೋ, ಅಥವಾ ನನ್ನ ಬಡತನದ ಜೀವನದಿಂದ ಅವಳಿಗೆ ಮುಕ್ತಿ ಬೇಕಿದ್ದಿತೇನೋ ಎಂದು ಕೊನೇರಿ ಯೋಚಿಸಿದ್ದೇ ಯೋಚಿಸಿದ್ದು. ಈ ಸಾಲು ಸಾಲು ಪ್ರಶ್ನೆಗಳು ಕೊನೇರಿ ಎದುರಿಗೆ. ಯಾವೊಂದಕ್ಕೂ ಸ್ಪಷ್ಟ ಉತ್ತರ ಸಿಗಲಿಲ್ಲ. ಅವಳು ಏನು ಬಯಸಿದಳೇನೋ, ಕಡೆಗೆ ನನಗಿಂತಲೂ ಆ ಸಾಹುಕಾರನೇ ಅವಳಿಗೆ ಹೆಚ್ಚಾದ. ಅಂತೆಯೇ ಅವನ ಬೆನ್ನುಬಿದ್ದಳು. ಎಂಬ ನಿರ್ಧಾರಕ್ಕೆ ಬಂದ.

‘ನಿನ್ನ ಹೆಂಡತಿಯನ್ನು ಹದ್ದುಬಸ್ತಿನಲ್ಲಿಟ್ಟು ಕೊಳ್ಳಬೇಕಿತ್ತು, ಅವಳಿಗೆ ಬಹಳ ಸಲುಗೆ ನೀಡಿದೆ ನೀನು’ ಎಂದು ಕಕ್ಕುಲಾತಿಯಿಂದ ಕೊನೇರಿಗೆ ಯಾರಾದರೂ ಅಂದರೆ, ‘ಹಾಗೇನಿಲ್ಲ ನನ್ನ ಒಳ್ಳೆತನವೇ ನನಗೆ ಮುಳುವಾಯ್ತು. ಎಲ್ಲರಂತೆ ನಾನೂ ಅವಳ ಮೇಲೆ ಕೋಪಗೊಂಡು ಏರಿ ಹೋಗಬೇಕೆಂದಾಗೆಲ್ಲ ಅವಳ ಮೇಲಿನ ಪ್ರೀತಿ ನನ್ನನ್ನು ತಡೆಯುತ್ತಿತ್ತು. ಕೋಪ ಕನಿಕರವಾಗಿ ಬದಲಾಗುತ್ತಿತ್ತು. ಆದರೂ ಅವಳು ಅದನ್ನು ಅರ್ಥಮಾಡಿಕೊಳ್ಳದೇಹೋದಳು. ಅಲ್ಲದೇ ಅವಳು ನನ್ನನ್ನು ಬಿಟ್ಟುಹೋಗೋದ್ರಲ್ಲೂ ನಂದೂ ತಪ್ಪಿದೆ’ ಎಂದು ತನ್ನೀ ಕಥೆಯನ್ನು ಭಾವುಕವಾಗಿ ಹೇಳುತ್ತಿದ್ದ ಕೊನೇರಿ. ಕೊನೆಗೆ, ‘ಯಾರು ಬಿಟ್ಟು ಹೋದರೇನಂತೆ, ಹೇಗಾದರೂ ಬದುಕಬೇಕಲ್ಲ. ಎಂದು ತನಗೆ ತಾನೆ ಸಮಾಧಾನಿಸಿಕೊಳ್ಳುತ್ತಿದ್ದನಾದರೂ ಆ ನೋವು ಮಾತ್ರ ಅವನಿಗೆ ಮಗ್ಗಲು ಮುಳ್ಳಾಗಿ ಸದಾ ಚುಚ್ಚುತ್ತಲೇ ಇತ್ತು.

ಗೌರಿ ಮನೆಬಿಟ್ಟು ಹೋದದ್ದೇ ಕೊನೇರಿಯ ಬದುಕು ದಿಕ್ಕೆಟ್ಟಂತಾಯ್ತು. ಅವನ ಸ್ನಾನ, ಊಟ, ನಿದ್ರೆ, ಎಲ್ಲವೂ ಅಸ್ತವ್ಯಸ್ತವಾದವು. ಸಾಲದ್ದಕ್ಕೆ ಅವನ ಕುಡಿತವೂ ಜೋರಾಯ್ತು. ಎಲ್ಲೆಂದರಲ್ಲಿ ಬಿದ್ದು ಒದ್ದಾಡುತ್ತಿದ್ದ ಕೊನೇರಿಯ ಹಿತೈಷಿಗಳು ಮಮ್ಮಲ ಮರುಗಿದರು. ‘ಕೊನೇರಿ ಮುಗ್ಧ ಮನಷ್ಯ ಅವನಿಗೆ ಹೀಗಾಗಬಾರದಾಗಿತ್ತು’ ಎಂದು ಕನಿಕರ ಬೀರತೊಡಗಿದರು. ಅವರ ಸಹಾನುಭೂತಿಯಿಂದ ಕೊನೇರಿ ತೀರಾ ಧರೆಗಿಳಿದುಹೋದ. ಕಡೆಗೆ ಊರಿನ ಜಂಜಡವೇ ಬೇಡವೆಂದು ನೆಮ್ಮದಿಯರಸಿ ಬಂದು ಬಿದ್ದದ್ದೇ ಈ ಕಾಡಮಡಿಲಿಗೆ.

ಅರಣ್ಯ ಇಲಾಖೆಯಲ್ಲಿ ಕೊನೇರಿಯದು ದಿನಗೂಲಿ ಕೆಲಸ. ತನ್ನದೆಂದು ಹೇಳಿಕೊಳ್ಳಲು ಮನೆಯೇನೂ ಇರಲಿಲ್ಲವಾದರೂ, ಮತ್ತೆ ಬಾಡಿಗೆ ಮನೆ ಮಾಡುವ ಮನಸ್ಸಾಗಲಿಲ್ಲ. ಇಲಾಖೆಯ ಆಫೀಸು, ಟ್ರೀ ಪಾರ್ಕ್, ಸಾಗುವಾನಿ ಪ್ಲಾಂಟೇಷನ್ ಕ್ಯಾಂಪ್ ಎಂದು ಒಂದಿನ ಅಲ್ಲಿ, ಒಂದಿನ ಇಲ್ಲಿ ಕೆಲಸ ಮಾಡುತ್ತ ರಾತ್ರಿ ಅಲ್ಲಿಯೇ ತಂಗಿ ಹೊತ್ತು ಹೊಂಡಿಸುತ್ತಿದ್ದ. ಕಡೆಗೊಂದು ದಿನ ಗೇಟ್‌ನ ಕೆಲಸ ಖಾಯಂ ಆಯ್ತು. ಗೇಟ್ ಪಕ್ಕದ ಅರಣ್ಯ ಶಿಬಿರವೇ ಅವನ ವಾಸ್ತವ್ಯಕ್ಕೆ ಸೂರಾಯ್ತು.

ಕೊನೇರಿ ಇಲಾಖೆಗೆ ಸೇರಿದ ಮೇಲೆ ಚೂರು ಸುಧಾರಿಸಿದಂತೆ ಕಂಡ. ಆದರೆ ಕುಡಿತ ಬಿಡಬೇಕೆಂದರೂ ಹೆಂಡತಿಯ ನೆನಪು ಅವನನ್ನು ಕುಡಿಯಲು ಪ್ರೇರೇಪಿಸುತ್ತಿತ್ತು. ದಿನರಾತ್ರಿ ಗೋವೆಯಿಂದ ಬರುವ ವಾಹನಗಳಲ್ಲಿ ಯಾರಾದರೂ ಹೆಂಡದ ಬಾಟಲಿ ತಂದೇ ತರುತ್ತಿದ್ದರು. ಗೇಟು ದಾಟಿ ಹೋಗುವಾಗ ಅವರು ಕುಡಿದುಳಿದ ಅರ್ಧ ಬಾಟಲಿಯನ್ನೋ. ಒಮ್ಮೊಮ್ಮೆ ಪೂರ್ತಿ ಬಾಟಲಿಯನ್ನೋ ಕೊನೇರಿಗೆ ಧಾರಾಳವಾಗಿ ನೀಡುತ್ತಿದ್ದರು. ಜೇಬಲ್ಲಿ ದುಡ್ಡಿಲ್ಲದಿದ್ದರೂ ಇವನಿಗೆ ಹೆಂಡಕ್ಕೇನೂ ಕೊರತೆಯೆನಿಸಲಿಲ್ಲ. ಕುಡಿತವೇ ಇವನ ನೋವಿಗೆ, ಚಿಂತೆಗೆ ಉಪಶಮನವಾದಂತೆನಿಸಿತು. ಆರೋಗ್ಯ ಹಾಳಾಗುತ್ತಿದ್ದರೂ ತಾನು ಕುಡಿತ ಬಿಡಬೇಕೆಂದು ಕೊನೇರಿ ಎಂದೂ ಯೋಚಿಸಿದವನಲ್ಲ. ಆದರೆ ಆ ಸಂದರ್ಭವೂ ಬಂದೇ ಬಂತು.

ಆದೊಂದು ರಾತ್ರಿ ಜೋರುಮಳೆ ಸಮಯ ರಾತ್ರಿ ಒಂದಾಗಿದ್ದಿತೇನೋ. ದಿನಕ್ಕಿಂತಲೂ ಹೆಚ್ಚಿಗೆ ಕುಡಿದಿದ್ದ ಕೊನೇರಿಗೆ ಮಂಪರು ಮಂಪರು. ಗೋವೆಯಕಡೆಗೆ ಹೊರಟುನಿಂತಿದ್ದ ಟ್ರಕ್ಕುಗಳವು. ಕೊನೇರಿ ಅವುಗಳನ್ನು ಕಾಡುಮಾರ್ಗವಾಗಿ ಬಿಡುವುದಿಲ್ಲವೆಂದರೂ, ಇದನ್ನು ಕೇಳದ ಟ್ರಕ್ಕಿನವರು ತಾವು ತಂದಿದ್ದ ರಮ್ ಬಾಟಲಿಗಳನ್ನು ಇವನ ಕೈಗಿತ್ತು ಗೇಟು ದಾಟಿ